ದೂದಗಂಗಾ ಮಂತ್ತು ವೇದಗಂಗಾ ನದಿಗಳಿಂದ ಏತ ನೀರಾವರಿ ಯೋಜನೆಗಳು

೩೫೫. ಶ್ರೀ ವೀರಕುಮಾರ್, ಅಪ್ಪಾಸೊ ಪಾಟೀಲ್ (ನಿಪ್ಪಾಣಿ).— ಮಾನ್ಯ ಲೋಕೋಪಯೋಗಿ ಮಂತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕೋಡಿ ತಾಲ್ಲೂಕಿನಲ್ಲಿ ವಿಶೇಷವಾಗಿ ಗಡಿ ಪ್ರದೇಶಗಳಲ್ಲಿ ದೂದಗಂಗಾ ಮತ್ತು ವೇದಗಂಗಾ ನದಿಗಳಿಗೆ ಏತ ನೀರಾವರಿ ಯೋಜನೆಗಳನ್ನು ತೆಗೆದುಕೊಳ್ಳಲಾಗಿದೆಯೇ?

ಆ) ಇಲ್ಲದಿದ್ದರೆ ಮೇಲೆ ಹೇಳಿದ ಪ್ರದೇಶಗಳಲ್ಲಿ ಏತ ನೀರಾವರಿ ಯೋಜನೆಗಳನ್ನು ತೆಗೆದುಕೊಳ್ಳದಿರಲು ಕಾರಣಗಳೇನು?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮಂತ್ತು ನೀರಾವರಿ ಮಂತ್ರಿಗಳು).—

ಅ) ಹೌದು

೧. ಎರಡು ಏತ ನೀರಾವರಿ ಯೋಜನೆಗಳು ಚಾಲ್ತಿಯಲ್ಲಿವೆ.

೨. ಎರಡು ಏತ ನೀರಾವರಿ ಯೋಜನೆಗಳಿಗೆ ಮಂಜೂರಾತಿ ನೀಡಿದೆ,

೩. ಎರಡು ಏತ ನೀರಾವರಿ ಯೋಜನೆಗಳು ೧೯೮೭-೮೮ರ ಆಯವ್ಯಯ ಪಟ್ಟಿಯಲ್ಲಿ ಸೇರಿಸಲಾಗಿದೆ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ,

ಕೊಪ್ಪ ತಾಲ್ಲೂಕಿನಲ್ಲಿ ವ್ಯವಸಾಯ ಇಲಾಖೆಯಿಂದ ಬೀಜೋತ್ಪಾದನೆ ಕೇಂದ್ರವನ್ನು ತೆರೆಯುವ ಬಗ್ಗೆ

೩೫೯. ಶ್ರೀ ಹೆಚ್. ಜಿ. ಗೋವಿಂದೇಗೌಡ (ಶೃಂಗೇರಿ).—ಮಾನ್ಯ ಕೃಷಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮಲೆನಾಡಿನ ಮಣ್ಣು ಹಾಗೂ ಹವಾಗುಣಕ್ಕೆ ಅನುಗುಣವಾಗಿ ಬೆಳೆ ಬೆಳೆಯಲು ಕೊಪ್ಪದಲ್ಲಿ ವ್ಯವಸಾಯ ಇಲಾಖೆಯಿಂದ ಬೀಜೋತ್ಪಾದನಾ ಕೇಂದ್ರವನ್ನು (ಸೀಡ್ ಫಾರಂ) ತೆರೆಯಲು ವ್ಯವಸ್ಥೆ ಮಾಡಲಾಗುವುದೇ :

ಆ) ಈ ಬಗ್ಗೆ ಸರ್ಕಾರದ ನಿರ್ಧಾರವೇನು, ಹಾಗೂ ೧೯೮೫ರಲ್ಲಿ ಹಿಂದಿನ ಕೃಷಿ ಸಚಿವರು ಈ ಬಗ್ಗೆ ನೀಡಿದ ಭರವಸೆ ಈಡೇರದಿರುವುದಕ್ಕೆ ಕಾರಣವೇನು :

ಶ್ರೀ ಆರ್.ವಿ. ದೇಶಪಾಂಡೆ (ಕೃಷಿ ಸಚಿವರು).—

ಅ) ಕೊಪ್ಪ ತಾಲ್ಲೂಕಿನಲ್ಲಿ ಒಂದು ಬೀಜೋತ್ಪಾದನಾ ಕೇಂದ್ರವನ್ನು ತೆರೆಯಲು ಪೂರ್ವಭಾವಿ ಸಮೀಕ್ಷಣೆ ನಡೆಸಲಾಗಿದೆ.

ಆ) ನಡೆಸಲಾದ ಪೂರ್ವಭಾವಿ ಸಮೀಕ್ಷಣೆಯು ಅಪೂರ್ಣವಾಗಿರುವುದೆಂದು ಕಂಡು ಬಂದಿದೆ. ಆದ್ದರಿಂದ ಈ ವಿಷಯಕ್ಕೆ ಸಂಬಂಧಿಸಿದ ಎಲ್ಲಾ ವಿವರಗಳನ್ನೊಳಗೊಂಡ ವರದಿಯನ್ನು ಕೊಡಬೇಕೆಂದು ಸಂಬಂಧಪಟ್ಟ ಅಧಿಕಾರಿಗಳನ್ನು ಕೋರಲಾಗಿದೆ. ವರದಿ ಬಂದನಂತರ ಈ ಬಗ್ಗೆ ಅಂತಿಮ ನಿರ್ಣಯ ತೆಗೆದುಕೊಳ್ಳಲಾಗುವುದು.

ಶೃಂಗೇರಿ ತೋಟಗಾರಿಕೆ ಇಲಾಖೆಯ ಜಾಗದಲ್ಲಿ ನರ್ಸರಿ ಬೆಳೆಯುವ ಬಗ್ಗೆ

೩೬೨. ಹೆಚ್.ಜಿ. ಗೋವಿಂದೇಗೌಡ (ಶೃಂಗೇರಿ).—ಮಾನ್ಯ ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ? .

ಅ) ಶೃಂಗೇರಿ ತೋಟಗಾರಿಕಾ ಇಲಾಖೆಗೆ ಸೇರಿದ ಜಮೀನಿನಲ್ಲಿ ಅಡಿಕೆ, ತೆಂಗು, ಮೆಣಸು, ಚಿಕ್ಕು ಹಾಗೂ ಇತರೆ ತೋಟದ ಬೆಳೆಗಳ ನರ್ಸರಿ ಬೆಳೆಯುವಂತಹ ಕಾರ್ಯವನ್ನು ಕೈಗೊಳ್ಳಲು ಸರ್ಕಾರದವರು ಉದ್ದೇಶಿಸಿರುವರೆ?